“ರಾಧತ್ತೇ...” ಜೋರಾಗಿ ಕೂಗಿದ ಮಾಧವ. ಯಾವ ಕೂಗೂ ಕೇಳದಷ್ಟು ದೂರ ದೂರ ಹೋಗಿಬಿಟ್ಟಿದ್ದರು ಅವನ ರಾಧತ್ತೆ.

ಮನೆಯೆಂಬೋ ಮನೆ ಶೋಕಸಾಗರದಲ್ಲಿ ಮುಳುಗಿತು. ತಾನು ಹುಟ್ಟಿ ಬೆಳೆದ ಊರಲ್ಲೇ ತನ್ನ ಅಂತ್ಯಕ್ರಿಯೆ ನಡೆಯಬೇಕೆಂಬ ಉದ್ದೇಶದಿಂದ ರಾಧಮ್ಮನನ್ನು ವಿಧಿ ಹುಟ್ಟೂರಿಗೆ ತಂದು ಸೇರಿಸಿತೇನೋ ಎನ್ನುವಂತೆ ಅವರ ಕೊನೆಯುಸಿರಿಗೆ ತೌರುಮನೆ ಸಾಕ್ಷಿಯಾಯ್ತು.

★★★

ಅಕ್ಕನ ಕ್ರಿಯಾಕರ್ಮಗಳಲ್ಲಿ ಯಾವ ಲೋಪವನ್ನೂ ಮಾಡಲಿಲ್ಲ ರಾಮಕೃಷ್ಣ. ‘ದುಡ್ಡು ಎಷ್ಟು ಬೇಕೋ ಕೇಳು ಅಪ್ಪಾ...’ ಅಂದಿದ್ದ ಕೈ ತುಂಬಾ ಸಂಪಾದಿಸುತ್ತಿದ್ದ ಕೇಶವ. ಹೇಳಿದಂತೆ ಹಣವನ್ನು ಒದಗಿಸಿಯೂ ಇದ್ದ. ಮಾಧವ ಕಾಲಿಗೆ ಚಕ್ರ ಕಟ್ಟಿಕೊಂಡವನಂತೆ ಓಡಾಡಿ ಎಲ್ಲಾ ವ್ಯವಸ್ಥೆಗಳನ್ನೂ ನಿಭಾಯಿಸಿದ್ದ. ಮುಕ್ತಹಸ್ತದ ದಾನಧರ್ಮ ಕಂಡು ಊರ ಜನ ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದರು. ‘ಪುಗಸಟ್ಟೆ ಮಾಡ್ತಾರಾ? ಕೋಟಿಗಟ್ಟಲೆ ದುಡ್ಡು ತಿಂದು ತೇಗಲ್ವಾ? ಬಂಪರ್ ಲಾಟರಿ ಹೊಡೀತು’ ಕರುಬಿನ ಮಾತಾಡಿಕೊಂಡವರು ಇದ್ದರು. ‘ಏನಾದ್ರಾಗ್ಲಿ, ಇದಾಗಲಿಲ್ಲ ಅಂತ ಕೈ ಬೆರಳು ಮಡಚದ ಹಾಗೆ ಎಲ್ಲಾ ಪೂರೈಸಿದ್ರು’ ಎಂದು ಹೊಗಳಿಕೆ ಹಾಕಿದವರೂ ಇದ್ದರು.

ಎಲ್ಲಾ ಸಾಂಗವಾಗಿ ಮುಗಿದು, ರಾಧತ್ತೆಯ ಕೋಣೆಯ ಕಪಾಟಿನಲ್ಲಿದ್ದ ಅವರ ಪುಸ್ತಕಗಳ ಮೇಲೆ ಕೈಯಾಡಿಸುತ್ತಾ ಮಾಧವ ಭಾವೋದ್ವಿಗ್ನಗೊಂಡಿದ್ದ. ‘ರಾಧತ್ತೇ, ಯಾಕೆ ಇಷ್ಟು ಅವಸರ ಆಗಿತ್ತೇ ನಿಂಗೆ?’ ಕಣ್ಣೊರೆಸಿಕೊಂಡಿದ್ದ.

★★★

ಕೆಲವೇ ದಿನಗಳ ಅಂತರದಲ್ಲಿ ಮತ್ತೊಂದು ಅನೂಹ್ಯ ಬೆಳವಣಿಗೆಗೆ ಸಾಕ್ಷಿಯಾಗಿ ಸ್ತಂಭಿಸಿ ಹೋಯ್ತು ಮನೆ. ಅಂದಾಜು ಬೆಳಗಿನ ಒಂಬತ್ತು ಗಂಟೆ. ತಿಂಡಿ ಮುಗಿಸಿ ಕೇಶವ ತೋಟಕ್ಕೆ ಹೋಗಿದ್ದ. ದಿನನಿತ್ಯದ ಊಟಕ್ಕೆ ಒಂದಿಷ್ಟು ಬಾಳೆಲೆ ಕುಯ್ದು ಕಟ್ಟು ಮಾಡಿ, ಲಿಂಬೆಹಣ್ಣು, ಕರಿಬೇವು ಎಂದು ಒಟ್ಟುಮಾಡಿಕೊಂಡು ಬರುವುದು ಅವನ ಉದ್ದೇಶ. ಮನೆಯಿಂದ ಓಡೋಡಿಕೊಂಡು ಬಂದಿದ್ದಳು ಅವನ ಹೆಂಡತಿ. ಮುಖದಲ್ಲಿ ಬೆವರಿನ ಜೊತೆ ಗಾಬರಿಯೂ ಸೇರಿಕೊಂಡು ಓಡಿ ಬಂದ ಏದುಬ್ಬಸದಲ್ಲಿ ಮಾತು ತಡೆತಡೆದು ಬರುತ್ತಿತ್ತು.

“ಅರ್ಜೆಂಟ್ ಬರ್ಬೇಕಂತೆ ಕಣ್ರೀ. ಮಾವ ಹೇಳಿ ಕಳ್ಸಿದಾರೆ.”

“ಏನಾಯ್ತು? ಏನಂತೆ?”

“ಯಾರೋ ಬಂದಿದಾರೆ ಕಣ್ರೀ. ರಾಧತ್ತೆಯ ಗಂಡನ ಮನೆಯ ಕಡೆಯೋರು. ಕಾರು ಮಾಡ್ಕಂಡು ಬಂದಿದಾರೆ, ನಾಕು ಜನ.”

“ಅಷ್ಟಕ್ಕೆ ಹೆದರಿಕೊಳ್ಳೋದ್ಯಾಕೆ? ಬಂದ್ರೆ ಬರ್ತಾರೆ...”

“ಮೊದ್ಲು ಬನ್ನಿ ಮಾರಾಯ್ರಾ.”

ಮಡದಿಯನ್ನು ಹಿಂದಿಟ್ಟುಕೊಂಡು ತೋಟದ ತಗ್ಗಿನಿಂದ ಮೇಲಕ್ಕೇರುವ ಮೆಟ್ಟಿಲು ಹತ್ತಿ ಅಂಗಳಕ್ಕೆ ಬಂದಿದ್ದ ಮಾಧವ. ಮುಂಚೇಕಡೆಯ ಕುರ್ಚಿಯ ಮೇಲೆ ಕಾಲ ಮೇಲೆ ಕಾಲು ಹಾಕಿಕೊಂಡು ಜಬರ್ದಾಗಿ ಕೂತಿದ್ದಾರೆ ಅಪರಿಚಿತ ಮಂದಿ. ಇಂತಾ ನೀಚರನ್ನು ಮನೆಯೊಳಗೆ ಬಿಟ್ಟುಕೊಂಡ ಅಪ್ಪನ ಮೇಲೆ ಕೆಟ್ಟ ಕೋಪ ಬಂತು ಮಾಧವನಿಗೆ. ಯಾವ ಘನಕಾರ್ಯ ಬಾಕಿ ಉಳಿದುಕೊಂಡಿದೆಯೆಂದು ಮನೆಯವರೆಗೆ ಹುಡುಕಿಕೊಂಡು ಬಂದಿದ್ದಾರೋ? ತನ್ನ ಉದ್ವಿಗ್ನತೆಯನ್ನು ನಿಯಂತ್ರಿಸಿಕೊಳ್ಳುತ್ತಾ ಮನೆಯೊಳಗೆ ಬಂದ ಮಾಧವ. ಪರಿಚಯದ ಯಾವ ಔಪಚಾರಿಕ ಮಾತುಕತೆಗಳೂ ನಡೆಯಲಿಲ್ಲ. ಬಂದವರು ನೇರವಾಗಿ ವಿಷಯ ಪ್ರಸ್ತಾಪಿಸಿರಬೇಕು, ಇವನನ್ನು ನೋಡುತ್ತಿದ್ದಂತೆ ಅಪ್ಪ ಹೇಳಿದ,